## ಉಪಾಯ

ವಾರ್ಡನ್ ನಾಣಿಯ ತಾಯಿಯನ್ನು ಕರೆದು, 'ನೋಡಿಯಮ್ಮಾ, ನಿಮ್ಮ ಮಗ ಕ್ಲಾಸು ತಪ್ಪಿಸಿ ಹುಡುಗಿಯರ ಹಿಂದೆ ಓಡಾಡ್ತಾ ಇದ್ದಾನೆ. ಓದಿನ ಕಡೆ ಗಮನ ಕಡಿಮೆ ಆಗ್ತಿದೆ' ಎಂದು ಹೇಳಿ, ಮತ್ತೆ 'ಅಮ್ಮಾ ನೀವೇನೂ ಹೆದರಬೇಡಿ, ಅವನನ್ನು ಸರಿ ದಾರಿಗೆ ತರೋದಕ್ಕೆ ನನ್ನ ಬಳಿ ಒಂದೆರಡು ಉಪಾಯಗಳಿವೆ' ಎಂದ. ಇದನ್ನು ಕೇಳಿದ ನಾಣಿಯ ತಾಯಿ, 'ಹೌದಾ? ಆ ಉಪಾಯಗಳೇನು ಈಗಲೇ ಹೇಳಿ. ಮೊದಲು ಅವರಪ್ಪನ ಮೇಲೆ ಪ್ರಯೋಗ ಮಾಡಬೇಕು' ಎಂದಳು!

**ಶಂಕರೇಗೌಡ ತುಂಬಕೆರೆ**





ಕಲೆ: ಗಣೇಶ ಆಚಾರ್ಯ

## ಅಂತರ

ಬಸ್ಸಿನಲ್ಲಿ ಓರ್ವ ಮಹಿಳೆ ತನ್ನ ಪಕ್ಕ ಮೂರು ಮಕ್ಕಳನ್ನು ಕೂರಿಸಿಕೊಂಡು ಕುಳಿತಿದ್ದಳು. ಕಂಡಕ್ಟರ್ ಟಿಕೆಟ್ ಕೊಡುತ್ತ ಬಂದ. 'ಅಮ್ಮಾ, ಈ ಮೂರು ಮಕ್ಕಳ ಟಿಕೆಟ್ ತಗೊರಿ' ಎಂದ. ಮಹಿಳೆ, 'ಅಯ್ಯ, ಮೂರೂ ಮಕ್ಕಳು ಸಣ್ಣ ಅದಾವು, ಒಂದಕ್ಕೆ ಎರಡು ವರ್ಷ, ಇನ್ನೊಂದಕ್ಕೆ ಎರಡೂವರೆ, ಮತ್ತೊಂದಕ್ಕೆ ಮೂರು... ಅಷ್ಟೆ' ಅಂದಳು. ಆಗ ಕಂಡಕ್ಟರ್ ಮಹಾಶಯ, 'ಅಯ್ಯೊ, ಅದು ಹೇಗೆ? ಐದು ತಿಂಗಳಿಗೊಬ್ಬರು ಹುಟ್ಟಿದರಾ?' ಎಂದ. ಆ ಮಹಿಳೆ ಕೊಂಚ ಕೋಪದಿಂದ, 'ಅಯ್ಯೊ, ಒಂದು ನಂದು, ಒಂದು ನನ್ನ ತಮ್ಮನ ಮಗ, ಇನ್ನೊಂದು ನನ್ನ ತಂಗಿಯ ಮಗಳು...' ಎಂದಳು.

**ಅರವಿಂದ ಜಿ. ಜೋಷಿ**